# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.27/100 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 17-12-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ವಿನೋದ್.ಕೆ.ಎಂ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಶಂಕರಪ್ಪ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ ಆನಂದ್ ಎಸ್. ಕಿರಿಯ ಆರೋಗ್ಯ ಪರಿವೀಕ್ಷಕರು, ಬಾಣಸವಾಡಿ
4. ಶ್ರೀಮತಿ ಗೀತಾ ಜೆ.ಇ. (ಬೆಸ್ಕಾಂ) ಬಾಣಸವಾಡಿ
5. ಶ್ರೀ ನಿಂಗಪ್ಪ (ಮಾರ್ಷಲ್), ಬಾಣಸವಾಡಿ

**ಹಾಜರಿದ್ದ ಸದಸ್ಯರು/ ಸ್ಥಳೀಯ ನಿವಾಸಿಗಳು**

1. ಶ್ರೀ ಅಮಿತ್ ನಿಗ್ಲಿ, ಬಾಣಸವಾಡಿ
2. ಶ್ರೀ ಕ್ರಿಸ್ಟೋಫರ್ ಕ್ರೂಜ್, ಬಾಣಸವಾಡಿ
3. ಶ್ರೀಮತಿ ಮಣಿಮೇಘಲೈ, ಬಾಣಸವಾಡಿ
4. ಶ್ರೀಮತಿ ಅಂಜುಮಿನಾಸ್, ಬಾಣಸವಾಡಿ
5. ಶ್ರೀ ಕರ್ನಲ್ ಗೋರ್ಪಡೆ, ಬಾಣಸವಾಡಿ
6. ಶ್ರೀ ಬಿ ಮುರಳಿ, ಬಾಣಸವಾಡಿ

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರುರವರು ಸ್ವಾಗತವನ್ನು ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಚರ್ಚಿಸಿದ ವಿಷಯಗಳು | ಸಂಬಂಧಪಟ್ಟ ಇಲಾಖೆ |
|---|---|---|
| 1 | ವಾರ್ಡ್ ವ್ಯಾಪ್ತಿಯ 3ನೇ ಕ್ರಾಸ್ ಜಂಕ್ಷನ್, 8ನೇ ಮುಖ್ಯರಸ್ತೆಯ ಇಂಟರ್ ಸೆಕ್ಷನ್‌ನ ಫುಟ್‌ಪಾತ್‌ಗಳಲ್ಲಿ ಹೊಸ ಹೋಟೆಲ್‌ಗಳನ್ನು, ನಿರ್ಮಾಣ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದರಿಂದ ಫುಟ್‌ಪಾತ್ ಡ್ರೈವ್‌ನ್ನು ಮಾಡಬೇಕಾಗಿ ಹಾಗೂ 9ನೇ ಮುಖ್ಯರಸ್ತೆಯಲ್ಲಿ ತರಕಾರಿ ಅಂಗಡಿಗಳನ್ನು ನಡೆಸಿದರೆ ಸಾರ್ವಜನಿಕರಿಗೆ ತೊಂದರೆಯಾಗುವುದಿಲ್ಲವಾದ್ದರಿಂದ ಅಲ್ಲಿ ಅಂಗಡಿಗಳನ್ನು ನಡೆಸಲು ಅನುಮತಿಯನ್ನು ನೀಡಿದರೆ ಉತ್ತಮ ಎಂದು ಕ್ರಿಸ್ಟೋಫರ್‌ರವರು ಸಭೆಗೆ ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿಗಳು/ ಹಿರಿಯ ಆರೋಗ್ಯ ಪರಿವೀಕ್ಷಕರು/ ಮತ್ತು ಕಾಮಗಾರಿ ಇಲಾಖೆ<br>ಸರ್ವಜ್ಞನಗರ ವಿಭಾಗ<br>**MOH/SHI/AE** |

| | | |
|---|---|---|
| 2 | ವಾರ್ಡ್‌ವ್ಯಾಪ್ತಿಯ ಜಯಜವಾನ್ ನಗರದಲ್ಲಿ Intensive Cleaning ಮಾಡಬೇಕಾಗಿ ಹಾಗೂ ಬಾಣಸವಾಡಿಯ ಮಿಲಿಟರಿ ಗ್ಯಾರಿಸನ್, ಅಯ್ಯಪ್ಪ ದೇವಸ್ಥಾನದ ಬಳಿ ಕಳ್ಳತನಗಳು ಹೆಚ್ಚಾಗಿ ನಡೆಯುತ್ತಿರುವದರಿಂದ ಸಿಸಿ ಕ್ಯಾಮರಾಗಳನ್ನು ಅಳವಡಿಸುವಂತೆ, ಶ್ರೀಮತಿ ಮಣಿಮೇಘಲೈರವರು ಸಭೆಯಲ್ಲಿ ಪ್ರಸ್ತಾಪಿಸಿದರು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ ಇಲಾಖೆ ಮತ್ತು ಘನತ್ಯಾಜ್ಯ ನಿರ್ವಹಣೆ ಉಪವಿಭಾಗ |
| 3 | ಎ) ವಾರ್ಡ್ ವ್ಯಾಪ್ತಿಯ 2 'ಕೆ' ಕ್ರಾಸ್, ಹೆಚ್‌ಆರ್‌ಬಿ ಆರ್ 1ನೇ ಬ್ಲಾಕ್, ರಸ್ತೆಗಳು ತೀರಾ ಹದಗೆಟ್ಟಿದ್ದು, ವಾಹನ ಸವಾರರಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಈ ರಸ್ತೆಗಳು DLP ಅವಧಿಯಲ್ಲಿದ್ದು, ಸದರಿ ರಸ್ತೆಗಳನ್ನು ಪುನಶ್ಚೇತನಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಲು ಕರ್ನಲ್ ಗೋರ್ಪಡೆಯವರು ಸಭೆಯಲ್ಲಿ ಕೋರಿದರು.<br><br>ಬಿ) ವಾರ್ಡ್ ವ್ಯಾಪ್ತಿಯ ಜಯಜವಾನ್ ನಗರದಲ್ಲಿ ಬಿಬಿಎಂಪಿಯ ಸಿಸಿ ಕ್ಯಾಮರದ ಕಂಬ ವಾಲಿಕೊಂಡಿದ್ದು ಕೂಡಲೇ ಅದನ್ನು ಸರಿಪಡಿಸಲು ಶ್ರೀಮತಿ ಮಣಿಮೇಘಲೈ ರವರು ಸಭೆಯಲ್ಲಿ ತಿಳಿಸಿದರು.<br><br>ಸಿ) ವಾರ್ಡ್ ವ್ಯಾಪ್ತಿಯ ಲಕ್ಷ್ಮಮ್ಮ ಲೇಔಟ್‌ನಲ್ಲಿ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿರುವುದರಿಂದ ವಾಹನ ಸವಾರರಿಗೆ ಬಹಳ ತೊಂದರೆಯಾಗುತ್ತಿರುವುದರಿಂದ ಅದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕಾಗಿ ಅಮಿತ್ ನಿಗ್ಲಿ ರವರು ಸಭೆಯಲ್ಲಿ ತಿಳಿಸಿದರು.<br><br>ಡಿ) 3ನೇ ಎ ಕ್ರಾಸ್‌ನಲ್ಲಿ ನಾಮಫಲಕಗಳು ಹಾನಿಯಾಗಿರುವುದರಿಂದ ಹೊಸ ನಾಮಫಲಕಗಳನ್ನು ಅಳವಡಿಸಬೇಕಾಗಿ ಅಂಜುಮಿನಾಸ್ ರವರು ಸಭೆಯಲ್ಲಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| 4 | ವಾರ್ಡ್ ವ್ಯಾಪ್ತಿಯ ಜೈ ಜವಾನ್ ನಗರದಲ್ಲಿ ಮರಗಳು ಹೆಮ್ಮರವಾಗಿ ಬೆಳೆದು ರಸ್ತೆಯಲ್ಲಿ ಸ್ಟ್ರೀಟ್ ಲೈಟ್‌ಗಳು ಮುಚ್ಚಿಕೊಂಡಿರುವುದರಿಂದ ರಾತ್ರಿಯ ವೇಳೆ ಸಾರ್ವಜನಿಕರು ಓಡಾಡಲು ಅನಾನುಕೂಲ ವಾಗುತ್ತಿರುವುದರಿಂದ ಸಂಬಂಧಪಟ್ಟ ಅರಣ್ಯ ಇಲಾಖೆಯವರು ಬೆಳೆದು ನಿಂತಿರುವ ಮರದ ರೆಂಬೆ ಕೊಂಬೆಗಳನ್ನು ಕತ್ತರಿಸುವಂತೆ ಮಣಿಮೇಘಲೈ ರವರು ಸಭೆಯಲ್ಲಿ ತಿಳಿಸಿದರು. | (ವಲಯ ಅರಣ್ಯಾಧಿಕಾರಿಗಳು)<br>**(Forest Department)** |

| | | |
|---|---|---|
| | ಎ) ವಾರ್ಡ್ ವ್ಯಾಪ್ತಿಯ 4ನೇ ಅಡ್ಡರಸ್ತೆ ಹೆಚ್‌ಆರ್‌ಬಿಆರ್ ಲೇಔಟ್‌ನಲ್ಲಿ ಬೀದಿ ದೀಪಗಳ ವೈರ್‌ಗಳು ಹಾಗೂ ಲೈಟ್‌ಗಳು ಸಮರ್ಪಕವಾಗಿ ಉರಿಯುತ್ತಿಲ್ಲವಾದ್ದರಿಂದ, ರಾತ್ರಿ ವೇಳೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಇದರ ಬಗ್ಗೆ ಅತೀ ಶೀಘ್ರವಾಗಿ ಗಮನ ಹರಿಸಬೇಕಾಗಿ ಮುರುಳಿರವರು ಸಭೆಯಲ್ಲಿ ತಿಳಿಸಿದರು<br><br>ಬಿ) ವಾರ್ಡ್ ವ್ಯಾಪ್ತಿಯ ಜೈಜವಾನ್ ನಗರದ 6ನೇ ಅಡ್ಡರಸ್ತೆಯಲ್ಲಿ ಬೀದಿ ದೀಪಗಳು ಉರಿಯುತ್ತಿಲ್ಲವಾದ್ದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಲು ಮಣಿಮೇಘಲೈ ರವರು ಸಭೆಗೆ ತಿಳಿಸಿದರು.<br><br>ಸಿ) ವಾರ್ಡ್ ವ್ಯಾಪ್ತಿಯ ಎಕೆ ಕಾಲೋನಿ, 8ನೇ ಎ ಮೇನ್, 2ಡಿ ಕ್ರಾಸ್ 1ನೇ ಬ್ಲಾಕ್, ವಿಜಯಬ್ಯಾಂಕ್ ಕಾಲೋನಿ, 1ನೇ ಮುಖ್ಯರಸ್ತೆಗಳಲ್ಲಿ ಬೀದಿ ದೀಪಗಳು ಉರಿಯದೇ ಇರುವುದರಿಂದ ಈ ಪ್ರದೇಶದಲ್ಲಿ ರಾತ್ರಿ ಸಮಯದಲ್ಲಿ ಓಡಾಡುವ ನಾಗರೀಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಮುರಳಿ ರವರು ಸಭೆಗೆ ತಿಳಿಸಿದರು. | **ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಉಪ ವಿಭಾಗ-ಪೂರ್ವ ವಲಯ** |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾಗಿರುವ ವಿದ್ಯುತ್ ಉಪವಿಭಾಗ ಮತ್ತು ವಲಯ ಅರಣ್ಯಾಧಿಕಾರಿಗಳು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಿರಲು ಕ್ರಮ ವಹಿಸಲು ಸೂಚಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

17.12.2022

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

K.M. 17/12/22

ಅಧ್ಯಕ್ಷರು
(ನೋಡಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

Assistant Executive Engineer
C.V. Raman Nagara Sub-Division
Bruhat Bengaluru Mahanagara Palike

<u>ಪ್ರತಿಯನ್ನು</u>

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ/ಕಛೇರಿ ಕಡತಕ್ಕೆ.